ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬಂಧವಾರ ದಿನಾಂಕ ೧೪ನೇ ಆಗಸ್ಟ್ ೧೯೮೫, ಶ್ರಾವಣ ೨೩, ಶಕ ವರ್ಷ ೧೯೦೭

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕಡೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ತಾಂತ್ರಿಕ ಶಾಲೆಗಳಿಲ್ಲದಿರುವುದು

೩೨೪ ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು). —ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಡೂರು ತಾಲ್ಲೂಕು ಪಂಚನಹಳ್ಳಿ ಗ್ರಾಮದ ಸುತ್ತಮುತ್ತ ಯಾವುದೂ ತಾಂತ್ರಿಕ ಕಾಲೇಜುಗಳಿಲ್ಲದೆ ಗ್ರಾಮಾಂತರ ವಿದ್ಯಾರ್ಥಿಗಳು ತಾಂತ್ರಿಕ ಜ್ಞಾನದಿಂದ ವಂಚಿತರಾಗಿರುವುದು ಸರ್ಕಾರದ ದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಯೊಂದನ್ನು ಮಂಜೂರು ಮಾಡಲಾಗುವುದೇ ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿ).—

ಅ) ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ೭೦ ತಾಂತ್ರಿಕ ಶಾಲೆಗಳಲ್ಲಿ ೩೪ ಗ್ರಾಮಾಂತರ ಪ್ರದೇಶಗಳಲ್ಲಿವೆ. ಇದರಲ್ಲಿ ಕಡೂರು ತಾಲ್ಲೂಕಿನ ತಾಂತ್ರಿಕ ಶಾಲೆಯೂ ಸೇರಿದೆ. ಗ್ರಾಮಾಂತರ ಮಕ್ಕಳು ತಾಂತ್ರಿಕ ಶಿಕ್ಷಣದಿಂದ ವಂಚಿತರಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ.ಬಿ. ಓಂಕಾರಮೂರ್ತಿ.—ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ಮುಂದಿನ ವರ್ಷದಿಂದ ಶೇಕಡಾ ೪೦ರಷ್ಟು ಸೀಟುಗಳನ್ನು ತಾಂತ್ರಿಕ ಕಾಲೇಜುಗಳಲ್ಲಿ ಮೀಸಲಾಗಿಡಬೇಕೆನ್ನುವ ಒಂದು ನಿರ್ಣಯವನ್ನು ಮಾಡಿದ್ದೀರಿ. ಅದರ ಪ್ರಕಾರ ಮುಂದಿನ ಶೈಕ್ಷಣಿಕ ವರ್ಷದಿಂದ ಇದು ಜಾರಿಗೆ ಬರುತ್ತದೆ. ಪಂಚನಹಳ್ಳಿ ಗ್ರಾಮದಲ್ಲಿ ಇನ್ನೊಂದು ತಾಂತ್ರಿಕ ಶಾಲೆಯನ್ನು ಪ್ರಾರಂಭಿಸುವುದಕ್ಕೆ ಖಾಸಗೀ ಸಂಸ್ಥೆಯವರು ಯಾರಾದರೂ ಮುಂದೆ ಬಂದರೆ ಆ ತಾಂತ್ರಿಕ ಶಾಲೆಗೆ ಮಂಜೂರಾತಿಯನ್ನು ಕೊಡುತ್ತೀರಾ ?

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಗಳು).—ಈಗಾಗಲೇ ಅಲ್ಲಿ ಸೀಟುಗಳ ಸಂಖ್ಯೆ ಜಾಸ್ತಿ ಮಾಡಿರುವುದರಿಂದ ಈ ಸಮಸ್ಯೆ ಈಗ ಉದ್ಭವಿಸುವುದಿಲ್ಲ.

ಪ್ರಶ್ನೆ ೩೨೫ (೯೧೪)

ಶ್ರೀ ಎ.ಬಿ. ದೇಸಾಯಿ ಮತ್ತು ಪಿ.ಸಿ. ಸಿದ್ದನಗೌಡರು.—ಸದಸ್ಯರು ಹಾಜರಿಲ್ಲ.